CC 1588/2023 PW1

**ದಿನಾಂಕಃ 17/06/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ- ಶ್ರೀ ಎಸ್ ಕೆ ವಕೀಲರಿಂದ ಆರೋಪಿಯ ಪರವಾಗಿ**

ನಾನು ವಿಐಎಸ್ ಎಲ್ ನಿವೃತ್ತ ನೌಕರ. ನಾನು ಅಲ್ಲಿ ನೌಕರನಾಗಿ ಕೆಲಸ ಮಾಡಿದ್ದರಿಂದ ನನಗೆ ವ್ಯವಹಾರ ಜ್ಞಾನ ಹಾಗೂ ಲೇವಾದೇವಿ ವ್ಯವಹಾರಕ್ಕೆ ಸಂಬಂಧಪಟ್ಟ ಕಾನೂನಿನ ಬಗ್ಗೆ ಜ್ಞಾನ ಇದೆ ಎಂದರೆ ಸರಿ. ನಾನು ವಿಐಎಸ್ ಎಲ್ ನಿಂದ 2016 ರ ಏಪ್ರಿಲ್ ತಿಂಗಳಿನಲ್ಲಿ ನಿವೃತ್ತಿ ಹೊಂದಿರುತ್ತೇನೆ. ನಿವೃತ್ತಿ ಆದ ಸಮಯದಲ್ಲಿ ನನಗೆ 45 ಲಕ್ಷ ರುಾಪಾಯಿ ಹಣ ಬಂದಿತ್ತು.

ಆ ಹಣದಿಂದ ಮಗಳ ಮದುವೆ ಮಾಡಿರುತ್ತೇನೆ. ಉಳಿದ ಹಣವನ್ನು ನನ್ನ ಬ್ಯಾಂಕ್ ಖಾತೆಯಲ್ಲಿ ಇಟ್ಟಿರುತ್ತೇನೆ. ನಿವೃತ್ತಿ ಹೊಂದಿದ ನಂತರ ನನಗೆ ಬೇರೆ ಯಾವುದೇ ಉದ್ಯೋಗ ಅಥವಾ ಆದಾಯ ಇಲ್ಲ ಎಂದರೆ ಸರಿ . ಸಾಕ್ಷಿಯು ಮುಂದುವರಿದು ನನಗೆ ನಿವೃತ್ತಿ ವೇತನ ಬರುತ್ತದೆ ಎಂದು ನುಡಿಯುತ್ತಾರೆ . ಸದರಿ ನಿವೃತ್ತಿ ವೇತನ ನನ್ನ ಬ್ಯಾಂಕ್ ಖಾತೆಗೆ ಬರುತ್ತದೆ ಎಂದರೆ ಸರಿ. ನಾನು ಯಾವುದೇ ಹಣವನ್ನು ಬ್ಯಾಂಕಿನಿಂದ ಪಡೆಯಬೇಕಾದರೆ ಬ್ಯಾಂಕ್ ನಿಂದ ಅಥವಾ ಎ ಟಿ ಎಂ ಮೂಲಕ ಪಡೆದುಕೊಳ್ಳಬೇಕು ಎಂದರೆ ಸರಿ.

ನಾನು ವಿಐಎಸ್ ಎಲ್ ಉದ್ಯೋಗಿಯಾಗಿದ್ದು ಹಿಂದಿನಿಂದಲೂ ಆದಾಯ ತೆರಿಗೆ ಪಾವತಿ ಮಾಡುತ್ತಿದ್ದೆ ಎಂದರೆ ಸರಿ. ನಾನು ಆದಾಯ ತೆರಿಗೆ ಪಾವತಿ ಮಾಡುತ್ತಿದ್ದರಿಂದ ನಾನು ಯಾವುದೇ ಹಣಕಾಸಿನ ವ್ಯವಹಾರವನ್ನು ಮಾಡಬೇಕಾದರೆ ಅದನ್ನು ಖಾತೆಯ ಮೂಲಕವೇ ಮಾಡಬೇಕು ಎನ್ನುವ ಅರಿವು ನನಗೆ ಇದೆ ಎಂದರೆ ಸರಿ. ಅದೇ ರೀತಿ ಯಾವುದೇ ಅಪ್ರಮಾಣಿಕ ಹಣಕಾಸಿನ ವ್ಯವಹಾರವನ್ನು ಮಾಡಬಾರದು ಎಂದು ತಿಳುವಳಿಕೆ ಇದೆ ಎಂದರೆ ಸರಿ.

ಆದಾಯ ತೆರಿಗೆ ಖಾಯ್ದೆಯ ಪ್ರಕಾರ 20 ಸಾವಿರ ಕ್ಕಿಂತ ಹೆಚ್ಚಿನ ಹಣದ ವ್ಯವಹಾರವನ್ನು ನಗದು ರೂಪದಲ್ಲಿ ಮಾಡಬಾರದು ಎಂದು ತಿಳುವಳಿಕೆ ಇದೆ ಎಂದರೆ ಸಾಕ್ಷಿಯು ಸದರಿ ವಿಚಾರ ನನಗೆ ತಿಳಿದಿತ್ತು ಎಂದು ನುಡಿಯುತ್ತಾರೆ.

ಆರೋಪಿಯ ತಂದೆಯ ಹೆಸರು ಖಂಡೇರಾವ್. ಆರೋಪಿ ಪ್ರಸ್ತುತ ಎಲ್ಲಿ ವಾಸವಾಗಿದ್ದಾರೆ ಎನ್ನುವುದರ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ. ನಿಪಿ-5 ರಲ್ಲಿ ನಮೂದಿಸಿರುವ ಆರೋಪಿಯದ್ದು ಎನ್ನಲಾದ ವಿಳಾಸದಲ್ಲಿ ಆರೋಪಿ ವಾಸವಾಗಿದ್ದಾರೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ. ಆರೋಪಿಗೆ ನಾನು ನೋಟೀಸನ್ನು ಕೊಟ್ಟಿರುತ್ತೇನೆ ಎನ್ನುವುದಕ್ಕೆ ಸಂಬಂಧಪಟ್ಟ ಸ್ವೀಕೃತಿ ಏನಾಗಿರುತ್ತದೆ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ಯಾವುದೇ ಒಬ್ಬ ವ್ಯಕ್ತಿಯ

ಹೆಸರು ಅಥವಾ ತಂದೆಯ ಹೆಸರು ತಪ್ಪಾಗಿದ್ದರೆ ವಿಳಾಸ ಸರಿ ಇಲ್ಲ ಎಂದು ಅಂಚೆ ಇಲಾಖೆಯವರು ನೋಟೀಸನ್ನು ವಾಪಾಸು ಮಾಡುತ್ತಾರೆ ಎಂದರೆ ಸರಿ.

ಆರೋಪಿಗೆ ನೀವು ಕಳುಹಿಸಿರುತ್ತೀರಿ ಎನ್ನುವ ನೋಟೀಸು ಅವರಿಗೆ ಇಲ್ಲಿಯವರೆಗೂ ಬಂದಿಲ್ಲ ಹಾಗೂ ಅದರ ಮಾಹಿತಿಯು ಇಲ್ಲ ಎಂದರೆ ಸಾಕ್ಷಿಯು ನನ್ನ ವಕೀಲರನ್ನು ಕೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ.

ಆರೋಪಿಯ ತಂದೆಯ ಹೆಸರು ಖಂಡೇರಾವ್ ಅಲ್ಲ ರಾಜಣ್ಣ ಎಂದರೆ ಸಾಕ್ಷಿಯು ನಾನು ಆರೋಪಿಯ ತಂದೆಯನ್ನು ನೋಡಿಲ್ಲ, ಅವರ ತಂದೆಯ ಹೆಸರು ನನಗೆ ನಿಖರವಾಗಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಯ ತಂದೆಯ ಹೆಸರಿನ ಬಗ್ಗೆ ಹಾಗೂ ಅವರ ವಿಳಾಸದ ಬಗ್ಗೆ ನಾನು ಯಾವುದೇ ದಾಖಲೆಯನ್ನು ನೋಡಿಲ್ಲ. ನಿಪಿ-5 ರಲ್ಲಿ ಆರೋಪಿಯ ತಂದೆಯ ಹೆಸರನ್ನು ಖಂಡೇರಾವ್ ಎಂದು ನಮೂದಿಸಿರುವುದರಿಂದ ಸದರಿ ನೋಟೀಸು ಆರೋಪಿಗೆ ಜಾರಿಯಾಗುವುದಿಲ್ಲ ಎಂದರೆ ಸರಿ. ನಿಪಿ-3, 5 ಮತ್ತು 5 ಎ ಅಲ್ಲಿ ಆರೋಪಿಯ ತಂದೆಯ ಹೆಸರನ್ನು ಖಂಡೇರಾವ್ ಎಂದೇ ನಮೂದಿಸಲಾಗಿದೆ ಎಂದರೆ ಸರಿ.

ನನ್ನ ಪತ್ನಿಯ ಹೆಸರು ಶಾರದ . ನಿಮ್ಮ ಪತ್ನಿ ಎಷ್ಟು ವರ್ಷಗಳಿಂದ ಚೀಟಿ ವ್ಯವಹಾರ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಅವರು ಚೀಟಿ ವ್ಯವಹಾರ ಮಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ಪತ್ನಿ ಅಕ್ರಮವಾಗಿ ಚೀಟಿ ವ್ಯವಹಾರ ಹಾಗೂ ಲೇವಾದೇವಿ ವ್ಯವಹಾರ ಮಾಡುತ್ತಿದ್ದು ಅದಕ್ಕೆ ಸಂಬಂಧಪಟ್ಟಂತೆ ಚೆಕ್ಕುಗಳನ್ನು ಪಡೆದುಕೊಂಡು ದುರ್ಬಳಕೆ ಮಾಡುತ್ತಿದ್ದಾರೆಂದು ಹಲವಾರು ದೂರುಗಳು ದಾಖಲಾಗಿರುತ್ತವೆ ಎಂದರೆ ಸರಿಯಲ್ಲ. ನಾನು ಹಿಂದೆ ಎನ್ ಎಂ ಸಿ, 4 ನೇ ಕ್ರಾಸ್, ಭದ್ರಾವತಿಯಲ್ಲಿ ವಾಸವಾಗಿದ್ದೆನು.

**( ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು).**

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸ.ಇ.

(ಚೇತನಾ )
2 ನೇ ಅಪರ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಭದ್ರಾವತಿ.